# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

**ಬೆಂಗಳೂರು - 560 001**

**ಅಧಿಸೂಚನೆ**

**3ನೆಯ ನವೆಂಬರ್ 2000**

ವಿದ್ಯುಚ್ಛಕ್ತಿ ಅಧಿನಿಯಮ, 2003 [2003ರ ಅಧಿನಿಯಮ ಸಂಖ್ಯೆ 36] ಪ್ರಕರಣ 181ರ ಉಪಪ್ರಕರಣ (1) ಮತ್ತು (2) (ಜಡ್ ಪಿ) ರಿಂದ ಮತ್ತು ಅದರ ಪರವಾಗಿ ಪ್ರದತ್ತವಾದ ಅಧಿಕಾರಗಳಿಂದ ತನ್ನನ್ನು ಸಮರ್ಥಗೊಳಿಸುವಂತಹ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಈ ಮುಂದಿನ ವಿನಿಯಮಗಳನ್ನು ರಚಿಸುತ್ತದೆ. ಅವು ಯಾವುವೆಂದರೆ,

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ [ರಾಜ್ಯ ಸಲಹಾ ಸಮಿತಿ] ವಿನಿಯಮಗಳು, 2004.

## ಅಧ್ಯಾಯ - I

## ಸಾಮಾನ್ಯ

1. ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ವ್ಯಾಪ್ತಿ.

    1. ಈ ವಿನಿಯಮಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ [ಸಲಹಾ ಸಮಿತಿ] ವಿನಿಯಮಗಳು, 2004 ಎಂದು ಕರೆಯಬಹುದಾಗಿದೆ.

    2. ಇವು, ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

    3. ಇವು, ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತವೆ.

2. ಪರಿಭಾಷೆಗಳು :

    1. ಈ ವಿನಿಯಮಗಳಲ್ಲಿ ಸಂದರ್ಭಕ್ಕೆ ಅನ್ಯಥಾ ಅಗತ್ಯಪಡಿಸಿದ

    (ಎ) 'ಅಧಿನಿಯಮ' ಎಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003

    (ಬಿ) 'ಕಾರ್ಯಸೂಚಿ ಪಟ್ಟಿ' ಎಂದರೆ ಆಯೋಗದ ಸಲಹಾ ಸಮಿತಿ ಸಭೆಯಲ್ಲಿ ವ್ಯವಹರಿಸಲಿರುವ ಉದ್ದೇಶಿತ ವ್ಯವಹಾರದ ಪಟ್ಟಿ.

    (ಸಿ) 'ಆಯೋಗ' ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

    (ಡಿ) 'ಅಧ್ಯಕ್ಷರು' ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರು.

    (ಇ) 'ಸದಸ್ಯ' ಎಂದರೆ ಆಯೋಗದ ಓರ್ವ ಸದಸ್ಯ.

    (ಎಫ್) 'ಸಮಿತಿ' ಎಂದರೆ ಆಯೋಗದ ಸಲಹಾ ಸಮಿತಿ.

    (ಜಿ) 'ಸಮಿತಿಯ ಸದಸ್ಯ' ಎಂದರೆ ಆಯೋಗದ ಓರ್ವ ಸದಸ್ಯರಿಗಿಂತ ಬೇರೆಯಾದ ಆಯೋಗದ ರಾಜ್ಯ ಸಲಹಾ ಸಮಿತಿಯ ಓರ್ವ ಸದಸ್ಯ.

    (ಎಚ್) 'ಅಧಿಕಾರಿ' ಎಂದರೆ ಆಯೋಗದ ಓರ್ವ ಅಧಿಕಾರಿ.

    (ಐ) 'ವಿನಿಯಮಗಳು' ಎಂದರೆ ಕವಿನಿ ಆಯೋಗ (ರಾಜ್ಯ ಸಲಹಾ ಸಮಿತಿ) ವಿನಿಯಮಗಳು, 2004.

    (ಜೆ) 'ಕಾರ್ಯದರ್ಶಿ' ಎಂದರೆ ಆಯೋಗದ ಕಾರ್ಯದರ್ಶಿ.

    2. ಈ ವಿನಿಯಮಗಳಲ್ಲಿ ಬಳಸಿರುವ ಹಾಗೂ ಮೇಲೆ ಪರಿಭಾಷಿಸದಿರುವ ಪದಗಳು, ಪದಾವಳಿಗಳು ಈ ಅಧಿನಿಯಮದಲ್ಲಿ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II

## ಸಮಿತಿಯ ರಚನೆ ಹಾಗೂ ಕಾರ್ಯಗಳು.

3. ಆಯೋಗದ ಸಲಹಾ ಸಮಿತಿಯ ರಚನೆ :

1. ರಾಜ್ಯ ಸರ್ಕಾರದ ಸಮಾಲೋಚನೆಯೊಂದಿಗೆ ಅಧಿನಿಯಮದ ಪ್ರಕರಣ 87ರ ಅನುಸಾರ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆಯೋಗವು ರಚಿಸಿದ ಸಮಿತಿಯನ್ನು ಆಯೋಗದ ಸಲಹಾ ಸಮಿತಿ ಎಂದು ತಿಳಿಯತಕ್ಕದ್ದು.

2. ಸಮಿತಿಯು 21ಕ್ಕಿಂತ ಹೆಚ್ಚಿಲ್ಲದಂತೆ ಸದಸ್ಯರನ್ನು ಒಳಗೊಂಡಿರತಕ್ಕದ್ದು.

3. ಆಯೋಗವು ಈ ಮುಂದಿನ ಕ್ಷೇತ್ರಗಳನ್ನು ಪ್ರತಿನಿಧಿಸುವ ಸದಸ್ಯರನ್ನು ನೇಮಕ ಮಾಡಬಹುದಾಗಿದೆ :

   ಎ. ವಿದ್ಯುಚ್ಛಕ್ತಿ ಬಳಕೆದಾರರು;

   ಬಿ. ವಾಣಿಜ್ಯ

   ಸಿ. ಕೈಗಾರಿಕೆ;

   ಡಿ. ಸಾರಿಗೆ

   ಇ. ಕೃಷಿ;

   ಎಫ್. ಕಾರ್ಮಿಕ;

   ಜಿ. ವಿದ್ಯುಚ್ಛಕ್ತಿ ವಲಯದಲ್ಲಿ ಸರ್ಕಾರೇತರ ಸಂಸ್ಥೆಗಳು;

   ಹೆಚ್. ವಿದ್ಯುಚ್ಛಕ್ತಿ ವಲಯದಲ್ಲಿನ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು ಆಯೋಗವು, ಅಗತ್ಯವೆನಿಸಿದರೆ ಆಸಕ್ತ ತಂಡಗಳ ಸಂಸ್ಥೆ ಅಥವಾ ಪ್ರತಿನಿಧಿಗಳೊಂದಿಗೆ ಸಮಿತಿಯ ಸದಸ್ಯರ ನೇಮಕಾತಿಗಾಗಿ ಸಮಾಲೋಚಿಸಬಹುದಾಗಿದೆ.

4. ಆಯೋಗವು, ಪ್ರಸರಣ ಲೈಸೆನ್ಸುದಾರರ ಓರ್ವ ಪ್ರತಿನಿಧಿ, ಉತ್ಪಾದನಾ ಕಂಪನಿಗಳ ಓರ್ವ ಪ್ರತಿನಿಧಿ, ಹಾಗೂ ವಿತರಣಾ ಕಂಪನಿಗಳಿಂದ ಈರ್ವರು ಪ್ರತಿನಿಧಿಗಳು, ಅವರಲ್ಲಿ ಓರ್ವರು ಗ್ರಾಮೀಣ ಪ್ರದೇಶ ಒಳಗೊಳಗೊಂಡ ಕಂಪನಿಯವರಾಗಿರುವವರನ್ನು ನಾಮಕರಣ ಮಾಡಬಹುದಾಗಿದೆ.

5. ವಿನಿಯಮ 3(3) ರಡಿಯಲ್ಲಿ ನಾಮಕರಣಗೊಳ್ಳುವ ಸಮಿತಿಯ ಸದಸ್ಯರ ಅವಧಿಯು, ಅವರ ನೇಮಕದ ಅಧಿಸೂಚನೆಯ ದಿನಾಂಕದಿಂದ ಮೂರು ವರ್ಷಗಳು;

ಪರಂತು ವಿನಿಯಮ 3(3)ರಡಿಯಲ್ಲಿ ಪಟ್ಟಿಮಾಡಿರುವಂತೆ ಹಿತಾಸಕ್ತ ತಂಡಗಳನ್ನು ಪ್ರತಿನಿಧಿಸುವ ವ್ಯಕ್ತಿ/ಸಂಘ/ಸಂಸ್ಥೆಗಳು ಮನರ್ ನೇಮಕಕ್ಕೆ ಅರ್ಹರಾಗಿರುತ್ತಾರೆ.

6. ಈ ಮುಂದಿನವರು ಸಮಿತಿಯ ಪದನಿಮಿತ್ತ ಸದಸ್ಯರಾಗಿರತಕ್ಕದ್ದು:

   ಅ) ಆಯೋಗದ ಅಧ್ಯಕ್ಷರು

   ಆ) ಆಯೋಗದ ಸದಸ್ಯರು

   ಇ) ಗ್ರಾಹಕ ವ್ಯವಹಾರಗಳು ಮತ್ತು ಸಾರ್ವಜನಿಕ ವಿತರಣೆ ಪದ್ಧತಿಯನ್ನು ನಡೆಸುತ್ತಿರುವ ರಾಜ್ಯ ಸರ್ಕಾರದ ಕಾರ್ಯದರ್ಶಿ.

7. ಆಯೋಗದ ಅಧ್ಯಕ್ಷರು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು.

8. ಆಯೋಗದ ಕಾರ್ಯದರ್ಶಿಯವರು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

4. ಆಯೋಗದ ಸಲಹಾ ಸಮಿತಿಯ ಕಾರ್ಯಗಳು :

ಸಮಿತಿಯ ಕಾರ್ಯಗಳು ಈ ಮುಂದಿನ ವಿಷಯಗಳಲ್ಲಿ ಆಯೋಗಕ್ಕೆ ಸಲಹೆ ನೀಡತಕ್ಕದ್ದು:

1. ರಾಜ್ಯದಲ್ಲಿನ ವಿದ್ಯುಚ್ಛಕ್ತಿ ಸರಬರಾಜು ಉದ್ದಿಮೆಗೆ ಸಂಬಂಧಿಸಿದ ನೀತಿಯ ಮೇಲಿನ ಪ್ರಶ್ನೆಗಳು.
2. ಆಯೋಗವು, ಲೈಸೆನ್ಸುದಾರರು ಒದಗಿಸುವ ವಿದ್ಯುತ್ತಿನ ಗುಣಮಟ್ಟ, ನಿರಂತರ ಹಾಗೂ ಸೇವೆಯ ವಿಸ್ತಾರತೆ;
3. ಲೈಸೆನ್ಸುದಾರರು ತಮ್ಮ ಲೈಸೆನ್ಸಿನ ಷರತ್ತುಗಳು ಮತ್ತು ಆಗತ್ಯತೆಗಳೊಂದಿಗೆ ಪಾಲನೆ;
4. ಗ್ರಾಹಕರ ಹಿತಾಸಕ್ತಿಯ ರಕ್ಷಣೆ;
5. ವಿದ್ಯುತ್ ಸಂಸ್ಥೆಗಳಿಂದ ಸರಬರಾಜು ಮತ್ತು ಸಮಗ್ರ ಕಾರ್ಯಾಧಾರಿತ ಗುಣಮಟ್ಟಗಳು;

   ಮತ್ತು ಆಯೋಗವು ಸಮಿತಿಯ ಮುಂದೆ ಮಂಡಿಸುವ ಇನ್ನಾವುದೇ ವಿಷಯಗಳ ಮೇಲೆ ಸಲಹೆ ನೀಡಬಹುದಾಗಿದೆ.

## ಅಧ್ಯಾಯ – III

### ಸಭೆಗಳು

5. ಸಮಿತಿಯ ಸಭೆಗಳು :

ಸಮಿತಿಯು. ಕನಿಷ್ಠ ಮೂರು ತಿಂಗಳಿಗೊಮ್ಮೆ ವ್ಯವಹರಣೆಗಾಗಿ ಸಭೆ ಸೇರತಕ್ಕದ್ದು.

6. ಸಭೆಗಳು ನಡೆಯುವ ಸ್ಥಳ:

ಸಮಿತಿಯ ಎಲ್ಲಾ ಸಭೆಗಳು ಸಾಮಾನ್ಯವಾಗಿ ಬೆಂಗಳೂರಿನಲ್ಲಿರುವ ಆಯೋಗದ ಕಚೇರಿಯಲ್ಲೇ ನಡೆಯತಕ್ಕದ್ದು.

7. ಸಭೆಗಳ ಬಗ್ಗೆ ಸೂಚನೆಗಳು :

1. ಸಮಿತಿಯ ಸಭೆಗಳ ಬಗ್ಗೆ ಸೂಚನೆಗಳನ್ನು ಬರವಣಿಗೆ ಮೂಲಕ 14 ದಿನಗಳಿಗೆ ಕಡಿಮೆ ಇಲ್ಲದಂತೆ ಉದ್ದೇಶಿತ ಸಭೆಯು ನಡೆಯುವ ದಿನಾಂಕ, ವೇಳೆ ಹಾಗೂ ಸ್ಥಳವನ್ನು ಸದಸ್ಯರಿಗೆ ತಿಳಿಸತಕ್ಕದ್ದು.
2. ಮೂರು ದಿನಗಳಿಗೆ ಕಡಿಮೆ ಅವಧಿ ಇದ್ದ ಪಕ್ಷದಲ್ಲಿ, ಅಧ್ಯಕ್ಷರು, ವಿಶೇಷ ಸಭೆಗಳನ್ನು ಸೂಚನೆ ಮೂಲಕ ಕರೆಯಬಹುದು.
3. ಯಾವುದೇ ಸದಸ್ಯರು/ಸಮಿತಿಯ ಸದಸ್ಯರು ಸೂಚನಾ ಪತ್ರ ಸ್ವೀಕರಿಸದಿದ್ದಲ್ಲಿ ವ್ಯವಹರಣೆಗಳನ್ನು ಅಥವಾ ಯಾವುದೇ ನಿರ್ಣಯದ ಮುಂಜೂರು ಅಥವಾ ಅಂತಹ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.
4. ಸಮಿತಿಯ ಸದಸ್ಯ/ಸದಸ್ಯರು ನೋಂದಾಯಿಸಿರುವ ನಿಗದಿತ ವಿಳಾಸಕ್ಕೆ ನಿಗದಿತ ವೇಳೆಯೊಳಗೆ ಅಂಚೆ ಮೂಲಕ ಅಥವಾ ದೂತನ ಮೂಲಕ ಕಳುಹಿಸಲಾಗಿರುವ ಸೂಚನೆಯನ್ನು ಕಳುಹಿಸಲಾಗಿದೆ ಎಂದು ಭಾವಿಸತಕ್ಕದ್ದು.

8. ಸಭೆಗಳ ಕಾರ್ಯಸೂಚಿ:

ಕಾರ್ಯದರ್ಶಿಯವರು, ಸಾಮಾನ್ಯವಾಗಿ ಸಭೆಯ ಕಾರ್ಯಸೂಚಿಯನ್ನು ಟಿಪ್ಪಣಿ, ಹೇಳಿಕೆ, ವರದಿಗಳು ಮೊದಲಾದುವುಗಳೊಂದಿಗೆ ಸಭೆಯ ಸೂಚನೆ ಕಳುಹಿಸತಕ್ಕದ್ದು.

9. ಸಭೆಗಳಿಗೆ ಕನಿಷ್ಠ ಹಾಜರಾತಿ :

1. ಸಭೆಯ ಕನಿಷ್ಠ ಹಾಜರಾತಿಗೆ ಸಮಿತಿಯ ಒಟ್ಟು ಸದಸ್ಯರ ಬಲದ ಪೈಕಿ 1/3 ಸದಸ್ಯರು ಇರತಕ್ಕದ್ದು. ಸಭೆಗೆ ಕನಿಷ್ಠ ಹಾಜರಾತಿಯು ಇಲ್ಲದಿದ್ದರೆ ಸಭೆಯನ್ನು ಮುಂದೂಡತಕ್ಕದ್ದು. ಮುಂದೂಡಿದ ಸಭೆಗೆ ಮತ್ತೊಂದು ಸೂಚನೆ ಅಗತ್ಯವಿಲ್ಲ ಮತ್ತು ಕನಿಷ್ಠ ಹಾಜರಾತಿಯ ಅಗತ್ಯವೂ ಇರುವುದಿಲ್ಲ. ಸಭೆ ಪ್ರಾರಂಭವಾದ ನಂತರ ಯಾವುದೇ ವೇಳೆಯಲ್ಲಿ, ನಡೆಯುತ್ತಿದ್ದ ಸಭೆಯ ಹಾಜರಾತಿ ಸಂಖ್ಯೆಯು ಕಡಿಮೆಯಾದಲ್ಲಿ ಸಭೆಯನ್ನು ರದ್ದುಗೊಳಿಸದೆ ಮುಂದುವರಿಸತಕ್ಕದ್ದು.

2. ಸಲಹಾ ಸಮಿತಿಯ ಸಭೆ ಮುಂದೂಡಿಕೆಗೆ ಮುನ್ನ ಮುಂದೂಡಲಾದ ಸಭೆಯಲ್ಲಿನ ಉಳಿದ ವಿಷಯಗಳನ್ನು ಹೊರತುಪಡಿಸಿ, ಅಧ್ಯಕ್ಷರು ತುರ್ತು ಎಂಬ ಅಭಿಪ್ರಾಯದಿಂದ ಯಾವುದೇ ಹೊಸ ವಿಷಯವನ್ನು ನೇರವಾಗಿ ಇಲ್ಲವೇ ಸೂಚನೆ ಅಥವಾ ಸೂಚನೆ ಇಲ್ಲದೆ ತರಬಹುದಾಗಿದ್ದು, ಆ ಮುಂದೂಡಿದ ಸಭೆಯಲ್ಲಿ ಯಾವುದೇ ಇತರ ವಿಷಯವನ್ನು ಪರಿಗಣಿಸತಕ್ಕದ್ದಲ್ಲ.

3. ಅಸ್ತಿತ್ವದಲ್ಲಿರುವ ಸಮಿತಿಯ ಸದಸ್ಯ ಸ್ಥಾನ ಖಾಲಿ ಇದೆ ಎಂಬ ಕಾರಣಕ್ಕಾಗಿ ಸಮಿತಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ. ಪರಂತು ಕಾರ್ಯಸೂಚಿ ಪಟ್ಟಿ ಸೂಚನೆಗಳನ್ನು ವಿತರಿಸಿದ್ದರೂ ಸೂಚನಾ ಪತ್ರ ಅಥವಾ ಕಾರ್ಯಸೂಚಿ ಸ್ವೀಕರಿಸದಿದ್ದ ಕಾರಣಕ್ಕಾಗಿ ಅಸಿಂಧುವಾಗತಕ್ಕದ್ದಲ್ಲ.

**10.** ಅಧ್ಯಕ್ಷತೆ ವಹಿಸುವ ಅಧಿಕಾರಿ :

1. ಅಧ್ಯಕ್ಷರು, ಸಭೆಗಳ ಅಧ್ಯಕ್ಷತೆ ವಹಿಸಿ ಮತ್ತು ವ್ಯವಹರಣೆಗಳನ್ನು ನಿರ್ವಹಿಸತಕ್ಕದ್ದು, ಯಾವುದೇ ಕಾರಣದಿಂದ ಅಧ್ಯಕ್ಷರು ಸಭೆಗಳಲ್ಲಿ ಉಪಸ್ಥಿತರಿರಲು ಸಾಧ್ಯವಿರದಿದ್ದ ಪಕ್ಷದಲ್ಲಿ ಆಯೋಗದ ಅತ್ಯಂತ ಹಿರಿಯ ಸದಸ್ಯರು ಸಭೆಯ ಅಧ್ಯಕ್ಷತೆ ವಹಿಸಿ ಅಧ್ಯಕ್ಷರ ಕಾರ್ಯನಿರ್ವಹಿಸತಕ್ಕದ್ದು.

2. ಅಧ್ಯಕ್ಷರು ಅಥವಾ ಸದಸ್ಯರು ಅಧ್ಯಕ್ಷತೆ ವಹಿಸುವ ಸಭೆಯಲ್ಲಿ ಯಾವುದೇ ವ್ಯವಹರಣೆಯ ಅಂಶಗಳ ಬಗ್ಗೆ ನೀಡುವ ತೀರ್ಪು ಅಂತಿಮ ಹಾಗೂ ಬದ್ಧವಾಗಿರತಕ್ಕದ್ದು.

11. ಚರ್ಚಿಸಬಹುದಾದ ವಿಷಯಗಳು :

ಕಾರ್ಯಸೂಚಿ ಇರುವ ವಿಷಯಗಳ ಜೊತೆಗೆ ಅಧ್ಯಕ್ಷರು ಅಥವಾ ಅಧ್ಯಕ್ಷತೆ ವಹಿಸಿರುವ ಸದಸ್ಯರ ಅನುಮತಿಯೊಂದಿಗೆ ಸದಸ್ಯರು ಉಲ್ಲೇಖಿಸಿರುವ ಯಾವುದೇ ವಿಷಯದ ಬಗ್ಗೆ ಚರ್ಚಿಸಬಹುದು.

12. ಸಭೆಗಳಲ್ಲಿ ಭಾಗವಹಿಸುವಿಕೆ :

ಅಧ್ಯಕ್ಷರಿಂದ ಆಹ್ವಾನಿತರಾಗುವ ಕಾರ್ಯದರ್ಶಿ ಮತ್ತು ಅಂತಹ ವ್ಯಕ್ತಿಗಳು. ಅಧ್ಯಕ್ಷರು ಅಥವಾ ಅಧ್ಯಕ್ಷತೆ ವಹಿಸುವ ಸದಸ್ಯರ ಅನುಮತಿಯೊಂದಿಗೆ ಯಾವುದೇ ಸಭೆಯಲ್ಲಿ ಹಾಜರಿದ್ದು ಚರ್ಚೆಗಳಲ್ಲಿ ಭಾಗವಹಿಸಬಹುದಾಗಿದೆ.

13. ಸಭೆಗಳ ನಡಾವಳಿಗಳು :

1. ಆಯೋಗದ ಕಾರ್ಯದರ್ಶಿ ಅಥವಾ ಅವರ ಗೈರುಹಾಜರಿಯಲ್ಲಿ ಅಧ್ಯಕ್ಷರು ಪದನಾಮೀಕರಿಸಿದ ಓರ್ವ ಅಧಿಕಾರಿಯು ಸಭೆಗಳ ನಡಾವಳಿಗಳನ್ನು ಮತ್ತು ಅದರ ನಿರ್ಣಯಗಳಿಗಾಗಿ ಪುಸ್ತಕವಿರಿಸಿ, ಅದರಲ್ಲಿ ಸಭೆಯಲ್ಲಿ ಹಾಜರಿದ್ದ ಆಹ್ವಾನಿತರು ಮತ್ತು ಸದಸ್ಯರ ಹೆಸರುಗಳು, ಅವರ ಹುದ್ದೆ ಮತ್ತು ಸಭೆಯ ನಡಾವಳಿ ಇತ್ಯಾದಿ ವಿಷಯಗಳನ್ನು ದಾಖಲಿಸತಕ್ಕದ್ದು. ಸಭೆಯ ನಡಾವಳಿಗಳ ಸಂಕ್ಷಿಪ್ತ ದಾಖಲೆಗೆ ಅಧ್ಯಕ್ಷರು ಸಹಿ ಮಾಡತಕ್ಕದ್ದು.

2 ಹಿಂದಿನ ಸಭೆಯ ನಡಾವಳಿಗಳನ್ನು ಮುಂದಿನ ಸಭೆಯಲ್ಲಿ ಸ್ಥಿರೀಕರಿಸತಕ್ಕದ್ದು.

## ಅಧ್ಯಾಯ – IV

## ಸದಸ್ಯರ ಸಭಾ ಶುಲ್ಕ ಮತ್ತು ಭತ್ಯೆಗಳು ಹಾಗೂ ರಾಜೀನಾಮೆ/ಸದಸ್ಯತ್ವದ ಸ್ಥಗಿತ

14. ಸಮಿತಿ ಸದಸ್ಯರ ಸಭಾ ಶುಲ್ಕ ಮತ್ತು ಪ್ರಯಾಣ ಭತ್ಯೆ :

1. ಈ ವಿನಿಯಮಗಳಲ್ಲಿ ಉಪಬಂಧಿಸಿರುವುದನ್ನು ಹೊರತುಪಡಿಸಿ ಸಮಿತಿಯ ಸದಸ್ಯರು ಯಾವುದೇ ಸಂಭಾವನೆಗೆ ಅರ್ಹರಿರತಕ್ಕದ್ದಲ್ಲ.

2. ಸಮಿತಿಯ ಪದನಿಮಿತ್ತ ಸದಸ್ಯರು ಮತ್ತು ಸರ್ಕಾರದ ಅಥವಾ ಸಾರ್ವಜನಿಕ ವಲಯದ ಉದ್ದಿಮೆಗಳ ಸದಸ್ಯರನ್ನು ಹೊರತುಪಡಿಸಿ, ಎಲ್ಲಾ ಸದಸ್ಯರಿಗೆ ಪ್ರತಿ ಸಭೆಗೆ ಉಪವೇಶನ ಭತ್ಯೆ ರೂ. 500–00ನ್ನು ಸಂದಾಯ ಮಾಡತಕ್ಕದ್ದು

3. ಸಮಿತಿಯ ಸದಸ್ಯರಿಗೆ, ಕರ್ನಾಟಕ ಸರ್ಕಾರದ 'ಎ' ದರ್ಜೆ ಅಧಿಕಾರಿಗಳಿಗೆ ಅನ್ವಯವಾಗುವ ದರಗಳಲ್ಲಿ ಪ್ರಯಾಣ ಮತ್ತು ದಿನಭತ್ಯೆಗಳನ್ನು ನೀಡತಕ್ಕದ್ದು.

15. ಸದಸ್ಯತ್ವದ ಸ್ಥಗಿತ :

1. ಗೈರುಹಾಜರಿಯಿಂದ : ಸಮಿತಿಯ ಯಾವುದೇ ಸದಸ್ಯರು, ಆಯೋಗಕ್ಕೆ ಮುಂಚಿತವಾಗಿ ತಿಳಿಸದೆ ನಿರಂತರವಾಗಿ ಸಮಿತಿಯ ಮೂರು ಸಭೆಗಳಿಗೆ ಗೈರುಹಾಜರಾದರೆ ಮತ್ತು ಗೈರುಹಾಜರಿಗೆ ಸಮಂಜಸ ಕಾರಣಗಳನ್ನು ಒದಗಿಸದಿದ್ದರೆ, ತತ್‌ಕ್ಷಣದಿಂದಲೇ ಸಮಿತಿಯಿಂದ ಅವರ ಸದಸ್ಯತ್ವ ಸ್ಥಗಿತಗೊಳ್ಳುವುದು.

2. ರಾಜೀನಾಮೆಯಿಂದ : ಸಮಿತಿಯ ಯಾವುದೇ ಸದಸ್ಯರು ತಮ್ಮ ಸ್ವ ಬರಹದ ಮೂಲಕ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಪತ್ರವನ್ನು ಆಯೋಗದ ಕಾರ್ಯದರ್ಶಿಯವರಿಗೆ ಕಳುಹಿಸಿದರೆ, ಮತ್ತು ಅಧ್ಯಕ್ಷರು ಅದನ್ನು ಅಂಗೀಕರಿಸಿದ ದಿನಾಂಕದಿಂದ ಜಾರಿಗೆ ಬಂದು, ಅವರ ಸದಸ್ಯತ್ವವು ಸ್ಥಗಿತಗೊಳ್ಳುವುದು.

3. ಉಳಿದ ಅವಧಿಗಾಗಿ ಖಾಲಿಯಿರುವ ಸಮಿತಿ ಸದಸ್ಯತ್ವಕ್ಕೆ ನಾಮಕರಣ ಮಾಡಲು ಆಯೋಗವು ಸೂಕ್ತ ಕ್ರಮ ತೆಗೆದುಕೊಳ್ಳುವುದು.

16. ಈ ವಿನಿಯಮಗಳಲ್ಲಿ ಉಪಬಂಧಿಸಿರುವಂತೆ ಸಭೆಗಳ ನಿರ್ವಹಣೆ ಬಗ್ಗೆ ವ್ಯಕ್ತಪಡಿಸದಿದ್ದ ಪ್ರಕರಣಗಳಲ್ಲಿ, ಸಭೆಯ ಎಲ್ಲಾ ವ್ಯವಹರಣೆಗಳ ನಿರ್ವಹಣೆಯ ವಿಷಯಗಳ ಬಗೆಗೆ ಸಭೆಯ ಅಧ್ಯಕ್ಷತೆ ವಹಿಸುವ ಅಧ್ಯಕ್ಷರ ನಿರ್ಧಾರವೇ ಅಂತಿಮವಾಗಿರತಕ್ಕದ್ದು.

17. ರದ್ದುಗೊಳಿಸುವುದು ಮತ್ತು ಉಳಿತಾಯ :

1) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ [ಸಲಹಾ ಸಮಿತಿ] ವಿನಿಯಮಗಳು, 2000 ರದ್ದುಪಡಿಸಲಾಗಿದೆ.

2) ಹಾಗಿದ್ದರೂ, ಅಂತಹ ರದ್ದುಗೊಳ್ಳುವ ವಿನಿಯಮಗಳಂತೆ ನಾಮಕರಣಗೊಂಡ ಸಲಹಾ ಸಮಿತಿಯ ಸದಸ್ಯರು ಅವರ ಉಳಿದ ಅವಧಿಗಾಗಿ ಈ ವಿನಿಯಮಗಳಂತೆ ಸದಸ್ಯರಾಗಿ ಮುಂದುವರಿಯತಕ್ಕದ್ದು.

ಆಯೋಗದ ಆದೇಶದ ಮೇರೆಗೆ,

ಸಹಿ

ಕಾರ್ಯದರ್ಶಿ

KERC (State Advisory Committee) Reg, 2004